ಈಡೂರು ಡಿಸ್ಟ್ರಿಕ್ಟು.

ತಾರೀಖು 1ನೇ ಜೂಲೈ 1884.

ಇದರಿಂದ ತಿಳಿಯಪಡಿಸುವದೇನಂದರೆ, ತರೀಕೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಜೇವಾರೆಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜುಗಳನ್ನು ಹಾಜರ್‌ಮಾಡಿದವರೆ ಆಗಲಿ ಅಥವಾ ವಾಪಸುಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರರೆ ಆಗಲಿ ಈ ನೋಟೀಸು ತಾರೀಖು ಲಾಗಾಯಿತು ಒಂದು ತಿಂಗಳವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರು ಹಾಜರಾಗಿ ಅವುಗಳನ್ನ ವಾಪಸ್ ತೆಗದುಕೊಳ್ಳತಕ್ಕದ್ದು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅವುಗಳು ನಾಶಪಡಿಸಲ್ಪಡುವವು.

ದಸ್ತಾವೇಜು ನಂಬರ್.	ದಸ್ತಾವೇಜು ತಾರೀಖು.	ರಿಜಿಸ್ಟರ್ ಮಾಡಿದ ತಾರೀಖು.	ದಸ್ತಾವೇಜು ಬರಪು ಕೊಟ್ಟವರ ಹೆಸರು.	ದಸ್ತಾವೇಜು ಬರಸಿ ಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ.
30 / 1882—83	7—6—82	8—6—82	ಬುಕ್ಕಾಂಬುಧಿ ಪಾಸಸ್ತೆ ಪುರುಷೊತ್ತಮೈನ ಮಗ ರಾಮಯ್ಯ	ತಿವರಾಮೈನ ಮಗ ಶಂಕರಪ್ಪ	ಷಣಾಯ್ತಿಪುರ ಗ್ರಾಮದಲ್ಲಿಯಿರುವ ಸರ್ವೆ ನಂಬರ್ 9ನೇ ಖುಷ್ಕಿ ಜಮೀನು ಪೈಕೀ 4ರಲ್ಲಿ ಬಂದು ಹಿಸ್ಸೆ 9 ರೂಪಾಯಿಗೆ ಕ್ರಯ
	22—4—81	19—5—82	ಮಾದನಹಳ್ಳಿ ನಂಜಪ್ಪನ ಮಗ ನಂಜುಂಡಯ್ಯ	ಪಟ್ಟದಹಳ್ಳಿ ತಿವಬಾರಪ ಮರಿಲಿಂಗಪ್ಪನ ಮಗ ರುದ್ರಣ	ಬೆಟ್ಟತಾವರೆಕೆರೆ, ಕಿದ್ದರಹಳ್ಳಿ, ನೇರ್ಲಕೆರೆ, ಈ ಗ್ರಾಮಗಳಲ್ಲಿ ಯಿರುವ ತರಿ, ಖುಷ್ಕಿ ಬಾಗಾಯತು ಸಹಾ 500 ರೂಪಾಯಿಗೆ 5 ವರುಷ ಭೋಗ್ಯ

ಜಿ. ಯಫ್. ಮೈಕಲ್‌ಜರ್ಡ್,
ಜಿಸ್ಟ್ರಾರ್.

ಸ್ಯ 1884ನೇ ಇಸವಿ ಮೇ ತಿಂಗಳ ಕಾಲಸ್ಥಿತಿ ರಿಪೋರ್ಟುಗಳು.

ಮೈಸೂರು ಡಿಸ್ಟ್ರಿಕ್ಟು.

ಮಳೆ—ಡಿಸ್ಟ್ರಿಕ್ಟಿನ ಯಲ್ಲಾ ತಾಲ್ಲೂಕುಗಳಲ್ಲೂ ಆಗಾಗ್ಯೆ ಭಾರಿ ಮಳೆಗಳು ಆಗಿರುತವೆ. ಸರಾಸರಿ 3·71 ಅಂಗುಲ ಮಳೆ ಅಳೆಲ್ಪಟ್ಟಿತು.

ಫಸಲ್—ಫಸಲಿನ ಪವೆಲು ಅನುಕೂಲವಾಗಿದ್ದೆ, ಮಾಹೆ ಮುಜಕೂರಲ್ಲಿ ರಾಗಿ, ಹರಳು, ಜೋಳ, ಹಾರಕ, ತೊಗರಿ, ಯಳ್ಳು ಯಿವು ಬಿತ್ತಲ್ಪಟ್ಟವು, ಯಾವದೂ ರೇಖೆ ಆಗಲಿಲ್ಲಾ.

ಜನಾರೋಗ್ಯ—ವಟ್ಟಾಮಳೆ ಜನಾರೋಗ್ಯ ತೃಪ್ತಿಕರವಾಗಿತ್ತು.

ಕಾಲ್ನಡೆ—ಮರ್ರೇ ರೋಗದಿಂದ ವಂದೇ ಕಾಲ್ನಡೆ ಚಾಮರಾಜನಗರದ ತಾಲ್ಲೂಕಿನಲ್ಲಿ ನಷ್ಟವಾಯಿತು; ಇತರ ಕಾರಣಗಳಿಂದ 1746 ಕಾಲ್ನಡೆಗಳು ಹೋದವು.

ದಾರಣೆ—ಸಲ್ಪ ಹೆಚ್ಚು ಕಡಿಮೆ ಯೀಕರೀತಿಯಾಗಿದೆ. ಅವ್ವಲ್ ತರದ ಅಕ್ಕಿ ರೂಪಾಯಿ 1ಕ್ಕೆ 11½ ಶೇರು ದುಯ್ಯಂ ತರಹೇದು 12½ ಶೇರು, ರಾಗಿ 30 ಶೇರು, ಹುರಳಿ 27 ಶೇರು ಈ ಪ್ರಕಾರ ಯಿತ್ತು.

ಅಬ್ದುಲ್‌ಖಾದರ್, ಕೆ. ಬಿ.
ಡೆಪ್ಯುಟಿ ಕಮ್ಮಿಷನರ್.